**ದಿನಾಂಕ: 24.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**<u>ಪಾಟೀಸವಾಲು: ಎದುರುದಾರರ ಪರ ವಕೀಲರಾದ ಶ್ರೀ ಎಸ್.ಎಸ್.ಜಿ ಅವರಿಂದ-</u>**

1. ಅರ್ಜಿದಾರರಾದ ಪುಟ್ಟಮ್ಮ 65-70 ವರ್ಷದ ಮಹಿಳೆ ಎಂದರೆ ಸರಿ. ಆದ್ದರಿಂದ ಅರ್ಜಿದಾರರು ಬಿ.ಪಿ. ಹಾಗೂ ಶುಗರ್ ನಂತ ಕಾಯಿಲೆಗಳಿಂದ ಬಳಲುತ್ತಿದ್ದಾರೆ ಎಂದರೆ ಅದನ್ನು ನಾನು ಹೇಳಲು ಸಾಧ್ಯವಿಲ್ಲ. ವೈದ್ಯರಿಂದ ಧೃಢೀಕರಣ ಪತ್ರ ಹಾಜರುಪಡಿಸಬೇಕು. ನಾನು ನೋಡಿದಂತೆ ಅವರು ಆರೋಗ್ಯವಾಗಿದ್ದಾರೆ. ಅವರು ಆರೋಗ್ಯವಾಗಿ ಓಡಾಡುತ್ತಿರುವುದನ್ನು ನೋಡಿದವರು ಇದ್ದಾರೆ.

2. ಅರ್ಜಿದಾರರ ಆನಾರೋಗ್ಯದ ಕಾರಣ ಅವರಿಗೆ ಅವರ ವಕೀಲರನ್ನು ಭೇಟಿಯಾಗಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಆರೋಗ್ಯವಾಗಿದ್ದಾರೋ ಇಲ್ಲವೋ ಎಂದು ನಾನು ನೋಡಲು ಹೋಗಿಲ್ಲ ಎಂದರೆ ಸರಿಯಲ್ಲ. ಅವರು ನನ್ನ ಮನೆ ಮುಂದೆಯೇ ದನಕರುಗಳನ್ನು ಹಿಡಿದುಕೊಂಡು ಓಡಾಡುತ್ತಿರುತ್ತಾರೆ.

3. ಮಾರ್ಚ್-2020 ರಿಂದ ಜುಲೈ-2021 ರವರೆಗೆ ಕೋವಿಡ್ ಕಾಯಿಲೆ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಲಾಕ್ ಡೌನ್ ಆಗಿತ್ತು ಆದ್ದರಿಂದ ಯಾರು ಮನೆಯಿಂದ ಹೊರಗೆ ಓಡಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅರ್ಜಿದಾರರಿಗೆ ಆನಾರೋಗ್ಯವಿದ್ದ ಕಾರಣ ಹಾಗೂ ಲಾಕ್ ಡೌನ್ ಪ್ರಯುಕ್ತ ಅರ್ಜಿದಾರರು ಬಂದು ತಮ್ಮ ವಕೀಲರನ್ನು ಭೇಟಿಯಾಗಲು ಸಾಧ್ಯವಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 65-70 ವರ್ಷ ವಯಸ್ಸಿನ ವ್ಯಕ್ತಿಗಳು ಮನೆಯಿಂದ ಹೊರಗೆ ಬಂದರೆ ಕೋವಿಡ್ ಹರಡುವ ಸಾಧ್ಯತೆ ಇರುತ್ತದೆ ಎಂಬ ಶುದ್ದಿ ಇತ್ತು ಎಂದರೆ ಸರಿ.

**4.** ಈ ಎಲ್ಲಾ ಕಾರಣಗಳು ನನಗೆ ಗೊತ್ತಿದ್ದರು ಕೂಡ ಅರ್ಜಿದಾರರು ಆರೋಗ್ಯವಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಹೇಳುತ್ತಿರುವುದು ಈ ಕಾಲದಲ್ಲ ಕೋವಿಡ್ ಕಾಲದ್ದು ಎಂದರೆ ನನಗೆ ಅವೆಲ್ಲಾ ನೋಡಿಕೊಂಡು ಹೇಳಲು ಸಾಧ್ಯವಿಲ್ಲ. ಕೋವಿಡ್ ಸಮಯದಲ್ಲಿ ಒಬ್ಬರ ಮನೆಗೆ ಇನ್ನೊಬ್ಬರು ಹೋಗುತ್ತಿರಲಿಲ್ಲವಾದ ಕಾರಣ ಆ ಸಮಯದಲ್ಲಿ ಅರ್ಜಿದಾರರು ಹೇಗಿದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.